ಮೇಲೆ ತಿಳಿಸಿದಂತೆ ಮನ್ನಾ ಮಾಡಲಾದ ಮೊಬಲಗನ್ನು ಸರ್ಕಾರವು ಆಯವ್ಯಯದಲ್ಲಿ ಅನುದಾನ ಒದಗಿಸುವ ಮೂಲಕ ಸಂಬಂಧಪಟ್ಟ ಸಹಕಾರ ಸಂಸ್ಥೆಗಳಿಗೆ ಭರಿಸಿಕೊಡುತ್ತದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1266(1759)**
ವಿಧಾನ ಸಭಾ ಸದಸ್ಯರ ಹೆಸರು	**ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ)**
ಉತ್ತರಿಸುವವರು	**ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)**

ಅ) ಭಾಗ್ಯಲಕ್ಷ್ಮಿ ಯೋಜನೆಯಡಿ ಉಡುಪಿ ತಾಲ್ಲೂಕಿನಲ್ಲಿ 1-4-06 ರಿಂದ ಎಷ್ಟು ಅರ್ಜಿಗಳು ಬಂದಿದೆ ಮತ್ತು ಎಷ್ಟು ಹೆಣ್ಣು ಮಕ್ಕಳ ಹೆಸರಿನಲ್ಲಿ ರೇವಣಿ ಇಡಲಾಗಿದೆ?

ಭಾಗ್ಯಲಕ್ಷ್ಮಿ ಯೋಜನೆಯಡಿ ಉಡುಪಿ ತಾಲ್ಲೂಕಿನಲ್ಲಿ ದಿನಾಂಕ 1-4-2006ರಿಂದ ಫೆಬ್ರವರಿ 2007ರ ಅಂತ್ಯದಲ್ಲಿ 725 ಅರ್ಜಿಗಳು ಬಂದಿವೆ ಪಾಲುದಾರ ಹಣಕಾಸು ಸಂಸ್ಥೆಯ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಫಲಾನುಭವಿಗಳ ಹೆಸರಿನಲ್ಲಿ ರೇವಣಿ ಇಡಲಾಗುವುದು ಸದ್ಯಕ್ಕೆ ಹಣವನ್ನು ಭಾಗ್ಯಲಕ್ಷ್ಮಿ ಸಾರ್ವಜನಿಕ ದತ್ತಿಯಲ್ಲಿ ಇರಿಸಲಾಗಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1267(1760)**
ಸದಸ್ಯರ ಹೆಸರು	**ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ)**
ಉತ್ತರಿಸುವ ಸಚಿವರು	**ಶ್ರೀ ಬಂಡೆಪ್ಪ ಖಾಶಂಪೂರ (ಕೃಷಿ ಸಚಿವರು)**

ಅ) ಸುವರ್ಣ ಕೃಷಿ ಹೊಂಡ ಯೋಜನೆಯಡಿ ಉಡುಪಿ ತಾಲ್ಲೂಕಿನಲ್ಲಿ ಎಷ್ಟು ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದೆ? (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)

2006–07ನೇ ಸಾಲಿನಲ್ಲಿ ಈವರೆಗೆ ಅಂದರೆ ದಿನಾಂಕ 05/03/2007 ರ ವರೆಗೆ ಉಡುಪಿ ತಾಲ್ಲೂಕಿನಲ್ಲಿ 130 ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದ್ದು, ಇದರ ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಕೆಳಗೆ ನೀಡಲಾಗಿದೆ

ವಿಧಾನ ಸಭಾ ಕ್ಷೇತ್ರ	ಕೃಷಿ ಹೊಂಡಗಳ ಸಂಖ್ಯೆ
ಬ್ರಹ್ಮಾವರ	72
ಉಡುಪಿ	32
ಕಾಪು	26
ಒಟ್ಟು	**130**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1268(1761)**

ಸದಸ್ಯರ ಹೆಸರು **ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ)**

ಉತ್ತರಿಸುವ ಸಚಿವರು **ಶ್ರೀ ಬಂಡೆಪ್ಪ ಖಾಶಂಪೂರ (ಕೃಷಿ ಸಚಿವರು)**

ಅ) ಭಾಗ್ಯದ ಬಂದಿ ಯೋಜನೆಯಡಿ ಉಡುಪಿ ತಾಲ್ಲೂಕಿನಲ್ಲಿ ಎಷ್ಟು ಅರ್ಜಿಗಳು ಬಂದಿವೆ ಮತ್ತು ಎಷ್ಟು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಎತ್ತು / ಕೋಣ ಹಾಗೂ ಗಾಡಿಗಳನ್ನು ಕೊಳ್ಳಲು ಸಹಾಯಧನ ನೀಡಲಾಗಿದೆ (ವಿಧಾನ ಸಭಾ ಕ್ಷೇತ್ರವಾರು ಫಲಾನುಭವಿಗಳ ವಿವರ ನೀಡುವುದು)?

ಉಡುಪಿ ತಾಲ್ಲೂಕಿನಲ್ಲಿ ಎತ್ತಿನಗಾಡಿಗಾಗಿ 99 ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ 34 ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಗಾಡಿಗಳನ್ನು ವಿತರಿಸಲಾಗಿದ್ದು ಇದರ ವಿಧಾನ ಸಭೆ ಕ್ಷೇತ್ರವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ